doc-538
T-P-2

ಗೋರಕ್ಷಣಿ
GORAKSHANA

9 ನೇ ವರ್ಷ — 1959 ನೇ ಏಪ್ರಿಲ್ ತಾ || 29 April 59

Protect the Cow ಗೋಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಪೋಷಕರು ರೂ 25, ಬೆಂಬಲಿಗರು ರೂ 10 (ಒಂದೇ ಸಾರಿ)

ಗೋರಕ್ಷಣ ಪತ್ರಿಕೆಯಲ್ಲಿ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನು ವಾರ್ತೆಗಳನ್ನೂ ಸಾದರದಿಂದ ಸ್ವೀಕರಿಸಲಾಗುವುದು

Advertise in Goraksana and help the pious cause

ವಿಳಾಸ: ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ದೊಡ್ಡಿಗಳನು ತೆಗೆಯಬೇಕು

ಗೋ ಸಂಪತ್ತು ಅಧಿಕಗೊಳಿಸಬೇಕೆಂದಿರುವ ನಮ್ಮ ಘನ ಸರ್ಕಾರ ಮತ್ತು ಅಭಿಮಾನಿಗಳಿಗೆ ನನ್ನ ಅಭಿಪ್ರಾಯ ಈ ರೀತಿ ಇರುತ್ತೆ —

1 ಇಡೀ ಇಂಡಿಯಾ ದೇಶದಲ್ಲಿರ ತಕ್ಕ ಗೋಬಂಧನಾ ಗೃಹಗಳನ್ನು ಅಂದರೆ ದೊಡ್ಡಿಗಳನ್ನು ಮೊದಲು ರದ್ದು ಗೊಳಿಸಬೇಕು

2 ಪ್ರತಿ ಮನೆ ಯಜಮಾನನು 2 ರಾಸುಗಳಿಗೆ ಕಡಿಮೆ ಇಲ್ಲದಂತೆ ಪೋಷಿಸಲು ಕಡ್ಡಾಯವಾದ ತಕ್ಕ ಕಾನೂನು ಮಾಡಬೇಕು

ಅನೇಕರಲ್ಲಿ ಕೆಲವರಿಗೆ ರತ್ನಪುಗಳನ್ನು ಸಾಕಲು ಇಷ್ಟವಿರುತ್ತೆ ಆದರೆ ಜಾಗದ ಅನಾನುಕೂಲ್ಯ ಮೇವಿಗೆ ತೊಂದರೆ, ರಾಸುಗಳಿಗೆ ದುಬಾರಿ ಬೆಲೆ ಇತ್ಯಾದಿ ಕಷ್ಟಗಳನ್ನು ಈಗಿನ ಜನವಲ್ಲಿ ತಾಂಡವಾಡುತ್ತಿರುವುದನ್ನು ಹೋಗಲಾಡಿಸಲು ತಕ್ಕ ಕ್ರಮಕೈಗೊಳ್ಳಬೇಕು

4 ಹಳ್ಳಿಗಳಲ್ಲಿ ಗೋವುಗಳನ್ನು ಸಾಕುವ ಕ್ರಮ ಪರಿಪಡಿಸಲು ರೈತರಿಗೆ ಸಲಹೆ ನೀಡುವಂಥ ಸಂಘಗಳು ಏರ್ಪಾಗಬೇಕು

5 ಉನ್ನತ ಮಟ್ಟದಲ್ಲಿ ರಾಸುಗಳನ್ನು ಸಾಕುವವರಿಗೆ ಒಡವೆ, ಭಾಗ್ಯವಂತ ಮತ್ತು ಶಿಫಾರ್ಸುದಾರನೆಂಬ ಭೇದಭಾವನೆಗಳನ್ನು ಬಿಟ್ಟು ಯೋಗ್ಯ ಬಹುಮಾನಗಳನ್ನು ಪ್ರತಿ 6 ತಿಂಗಳಿಗೊಂದಾರ್ಯ ಕೊಡುತ್ತಾ ಬರಬೇಕು

6 ಈ ಬಾಬ್ತು ಖರ್ಚುಗಳಿಗಾಗಿ ಸಾರ್ವಜನಿಕರಿಂದ ಫಂಡು ವಸೂಲ್ಮಾಡದೆ ಅಲ್ಲದೆ ಸರ್ಕಾರ ಸಹ ಸಹಕರಿಸಬೇಕು

— ಎಂ ಎಚ್ ಇಂದ್ರಸಿಂಗ್

ಖುರಾನು — ಗೋವಧೆ

ದೇಶ ನಾಯಕರು ಕೆಲವರು ಗೋವಧೆಯು ಮುಸ್ಲಿಮರಿಗೆ ಒಂದು ಹಕ್ಕೆಂದು ಭಾವಿಸುವದುಸಮಂಜಸವಾಗಿ ತೋರುವದಿಲ್ಲ ಸನ್ಮಾರ್ಗ ದರ್ಶಕವೆಂದು ಪ್ರಸಿದ್ಧಿ ಪಡೆದ ಮುಸ್ಲಿಂರ ಮತಗ್ರಂಥವು ನಿರಾಹಾರಿ, ಫಲಾಹಾರಿಗಳಿಗೇ ಪ್ರಾಧಾನ್ಯತೆಯನ್ನು ಕೊಟ್ಟಿರುವದೆಂಬ ವಿಷಯ ಅದನ್ನು ಓದುವವರಿಗೆಲ್ಲ ತಿಳಿದೇ ಇದೆ. ಫಲಭಕ್ಷಣೆಯು ಮಾನವಲೋಕ ಕಲ್ಯಾಣಕಾರಿಯೆಂದು ಇಸ್ಲಾಂ ಮತಗ್ರಂಥದ ಮೂಲಕ ದಯಾಮಯನಾದ ಅಹಮ್ಮದ್ ತಿಳಿಸಿದ್ದಾನೆ ಅದುದರಿಂದ ಗೋ ಮಾಂಸ ಭಕ್ಷಣೆಗಾಗಿ ಗೋವುಗಳನ್ನು ಸಾಯಿಸಬೇಕೆಂದು ತಮ್ಮ ಮತಗ್ರಂಥ ವಿಧಿಸುತ್ತಿರುವದೆಂದು, ದೈವಾಜ್ಞೆಯಿ ಧೇಯರಾಗಿ ಉಭಯಲೋಕಗಳಲ್ಲಿ ಉತ್ಕೃಷ್ಟಸ್ಥಾನವನ್ನು ಹೊಂದಲೆಳಸುವ ಮುಸ್ಲಿಂರಾದರೂ ಭಾವನೆಯನ್ನು ಮಾಡಕೂಡದು

ಇಸ್ಲಾಂ ಮತಕ್ಕೆ ಆಧಾರ ಗ್ರಂಥವಾದ ಖುರಾನನ್ನು ಹಜರತ್ ಮಹಮದ್ ಪೈಗಂಬರ್‌ರವರಿಗೆ ದೇವರು ಅನುಗ್ರಹಿಸಿ ಕೊಟ್ಟ ಕಾಲದಲ್ಲಿ ಏಷ್ಯದೇಶದ ಮಧ್ಯಭಾಗದಲ್ಲಿ ಅನೇಕ ಜಾತಿಗಳವರು ನೆಲೆಸಿದ್ದರು ಆ ಜಾತಿಗಳವರಲ್ಲಿ ಖುರೈಷಿಗಳು, ಮುಷ್ರಿಕ್‌ರು, ಯಹೂದೀಯರು, ನಸಾರಾನೀಗಳು (ಕ್ರೈಸ್ತರು) ಮುಸಲ್ಮಾನರು ಮುಖ್ಯರು ಇವರೆಲ್ಲರೂ ಮತ ವಿಷಯದಲ್ಲಿ ಪಂಸ್ಪರ ಅಗಿಂದಾಗ್ಗೆ ಜಗಳವಾಡುತ್ತಿದ್ದರು ಇವರಲ್ಲಿ ಮೊದಲನೆ ಮೂರು ವರ್ಗದವರು ವಿಗ್ರಹಾರಾಧನೆಗೆ ಸೇರಿದವರು ಇವರೆಲ್ಲರಲ್ಲೂ ಮುಸಲ್ಮಾನರೇ ಶ್ರೇಷ್ಠತಮರು

ಇವರು ಕರುಣಾನಿಧಿಯಾದ ಖುದಾವಿನಲ್ಲಿಯೂ, ಅತನ ಏಕತ್ವ (ದೌಹೀದ್) ದಲ್ಲಿಯೂ ಮನಃಪೂರ್ವಕವಾಗಿ ನಂಬಿಕೆಯುಳ್ಳವರಾಗಿ, ದೇವರಿಗೆ ಪ್ರಿಯತಮರಾದ ಭಕ್ತರೆಂದು ಹೆಸರು ಪಡೆದವರು ಈ ಮತಸ್ಥರ ದೀಪಕಮಾನನು ಹಜರತ್ ಮಹಮದ್ ರಸೂಲ್‌ರವರು. ತಮ್ಮ ಪ್ರವರ್ತಕರ ಆಜ್ಞೆಯನ್ನು ಪಾಲಿಸುತ್ತಾ, ಪರಮಭಕ್ತಿಯೊಡನೆ ಖುರಾನನ್ನು ಪಠಿಸುತ್ತಾ, ಅದರಲ್ಲಿಯ ಧರ್ಮವನ್ನನುಸರಿಸುತ್ತಾ, ತಮಿಗಾಗಿ ಅ ಪವಿತ್ರ ಗ್ರಂಥವನ್ನು ಕೊಟ್ಟ ಖುದಾವಿನಲ್ಲಿ ಸದಾ ಕೃತಜ್ಞತೆಯೊಡನೆ ವರ್ತಿಸುವ ವಿಶ್ವಾಸಪರರು ಮುಸಲ್ಮಾನರು ಮಾತ್ರವೇ ಖುರಾನು ಗ್ರಂಥವು ಈ ಬಗೆಯಲ್ಲಿ ವ್ಯಾಖ್ಯಾನವನ್ನು ಮಾಡಿದೆ ಮುಸಲ್ಮಾನರೆಂದರೆ ದೇವರಿಗೆ, ಅತನ ವಿಧಿಗಳಿಗೆ ವಿಧೇಯರೆಂದು ಖುರಾನಿನ ನಿರ್ವಚನವಾಗಿದೆ — ಸಶೇಷ

ದೇಶದಲ್ಲಿನ ಪಶುಪಾಲನಾ ಕ್ಷೇತ್ರದಲ್ಲಿನ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಸಹಕಾರಿ ವ್ಯವಸಾಯ ಬಹಳ ಪ್ರಯೋಜನಕರವಾದುದು ಎಂದು ಭಾರತದ ವ್ಯವಸಾಯ ಮಂತ್ರಿ ಡಾ|| ಪಂಜಾಬರಾವ್ ದೇಶಮುಖರು ದೊಂಬಾಯಿನಲ್ಲಿ ನಿನ್ನೆ ತಿಳಿಸಿದರು

ಒಂದು ಹಸುವನ್ನು ಸದಾಕಾಲ ಚೆನ್ನಾಗಿ ತಿಂಡಿಕೊಟ್ಟು ತಕ್ಕ ಎಚ್ಚರಿಕೆಯಿಂದ ಸಾಕುತ್ತಿದ್ದರೆ ಕರುಹಾಕಿದ ಸಮಯದಲ್ಲಿ ತುಂಬಾ ಹಾಲು ಕೊಡುತ್ತೆ

ಉತ್ತಮ ಪಶುಪಾಲನೆ ಅಮೇರಿಕಕ್ಕೆ ತಿಗಣೆ

ಕೇಂದ್ರ ಸರ್ಕಾರದ ವಾಣಿಜ್ಯ, ಕೈಗಾರಿಕೆಗಳ ಮಂತ್ರಿ ಶ್ರೀ ಲಾಲ ಬಹದ್ದೂರ ಶಾಸ್ತ್ರಿಯವರು ಕಳೆದ ತಿಂಗಳು ಬೆಂಗಳೂರಿನಲ್ಲಿ ದಸರಗಳ ಅಖಿಲ ಭಾರತ ಪ್ರದರ್ಶನ ಉದ್ಘಾಟಿಸಿ, ಉತ್ತಮ ಪಶುಪಾಲನೆ ಎಂದರೆ ಉತ್ತಮ ವ್ಯವಸಾಯ ಉತ್ತಮ ವ್ಯವಸಾಯ ವೆಂದರೆ ಉತ್ತಮ ವ್ಯಾಪಾರ ಮತ್ತು ಉತ್ತಮ ಕೈಗಾರಿಕೆ ಎಂದರು

ಸಜೀವ ತಿಗಣೆಗಳನ್ನು ಔನ್ಸು 1 ಕ್ಕೆ ರೂ 25 ಕ್ಕೆ ಕೊಳ್ಳುವುದಾಗಿ ಕರಾಚಿ ಪತ್ರಿಕೆಗಳಲ್ಲಿ ಅಮೇರಿಕಾ ಜಾಹೀರಾತು ಪ್ರಕಟಿಸಿದೆ ಇವುಗಳನ್ನು ವಿಮಾನದಲ್ಲಿ ಅಮೇರಿಕಾಕ್ಕೆ ಕಳಿಸಿ ಅಲ್ಲಿ ಕ್ರಿಮಿನಾಶಕ ತಯಾರಿಸಲು ಉಪಯೋಗಿಸಲಾಗುವದು.

ಸಪ್ತತೀಲ

ಮಾಂಘೀರ್ 28 — ಸರ್ವ ನ್ಯಾಯಾಲಯಗಳೂ ಈ ಕೆಳಗಿನಂತೆ ನಡೆಯಬೇಕೆಂದು ಮಾಂಘೀರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಸೂಚನೆ ಇತ್ತಿದ್ದಾರೆ —

ಸಾರ್ವಜನಿಕರ ಸೇವೆ

ಕಾನೂನಿನ ನ್ಯಾಯ ಮತ್ತು ಸೂಕ್ಷ್ಮ ಜ್ಞಾನ

ಕೋರ್ಟುಗೆ ಹಾಜರಿರುವವರಿಗೆ ಸೌಜನ್ಯ ಭೂತಿ

ಸತ್ಯ ಮತ್ತು ನೈತಿಕತೆಯ ಹಾದಿಯಲ್ಲಿ ನಡೆಯುವುದು

ಸರ್ವ ಕಾರ್ಯಗಳಲ್ಲಿ ನಿಷ್ಪಕ್ಷಪಾತ

ನ್ಯಾಯ ಪರಿಪಾಲನೆಯ ಕಾಲದಲ್ಲಿ ಜಾತಿ ಮತ ಭಾವನೆ ಬಿಡುವುದು

ಕರ್ತವ್ಯ ಮತ್ತು ಜವಾಬ್ದಾರಿ ಗಮನಿಸುವುದು

ಮೇ 4 ನೇ ತಾ|| ಬೆಂಗಳೂರು ಕಾರ್ಪೊರೇಷನ್ ಗವರ್ನರಿಗೆ ಮಾನಪತ್ರ ಅರ್ಪಿಸುವದು

o o

ಪಾಟ್ನಾ 18— ಸೀತಾಮಾರಿಯಲ್ಲಿ ನಿನ್ನೆ ಆಪಾದಿಸಲಾದ ಗೋಹತ್ಯ ಸಂಬಂಧದಲ್ಲಿ ಅದ ಹೊಡೆದಾಟದಲ್ಲಿ ನಿನ್ನೆ ಗಾಯಗೊಂಡವರಲ್ಲಿ ಮತ್ತಿಬ್ಬರು ಸತ್ತಿರುವರು

ಗೋ ಪಾ ಲ ನೆ

ನಮ್ಮ ದೇಶವು ಕೃಷಿಯ ದೇಶವು ಕೃಷಿಯ ಅಭಿವೃದ್ಧಿಯು ಉತ್ತಮ ರೀತಿಯಿಂದಲಾದರೆ ಮಾತ್ರವೇ ಈ ದೇಶದ ಆರ್ಥಿಕ ಉನ್ನತಿಯಾಗಿ ಬಡತನವು ಹೋಗಬಹುದಾಗಿದೆ. "ಕೃಷಿತೋ ನಾಸ್ತಿ ದುರ್ಭಿಕ್ಷಂ" ಎಂಬುದನ್ನು ನಮ್ಮವರು ಮೊದಲಿಂದಲೇ ಕಂಡುಕೊಂಡಿದ್ದಾರೆ.

ಸಹಸ್ರಾವಧಿ ವರ್ಷಗಳ ಕಾಲ ನಾವು ಅನ್ಯ ಜನರಿಗೆ ಧಾನ್ಯವೆನ್ನು ಮಾರಾಟ ಮಾಡಿದ್ದುಂಟು. ಆದರೆ ಈಗ ಕೋಟಿಗಟ್ಟಲೆ ಹಣಕೊಟ್ಟು ಧಾನ್ಯ ಕರಿಸಿದರೂ ಅರ್ಧಹೊಟ್ಟೆ ತುಂಬಿಸಲಾಗುವುದಿಲ್ಲ. ಇದಕ್ಕೆ ಜನಸಂಖ್ಯೆ ಏರಿದುದೇ ಕಾರಣವೆಂದು ತರ್ಕಿಸುವುದು ಸರಿಯಲ್ಲ. ಒಂದು ಕಾಲದಲ್ಲಿ 80ಕೋಟಿ ವರಿಗೆ ನಮ್ಮ ಜನಸಂಖ್ಯೆ ಇತ್ತೆಂದೂ ಮತ್ತೊಮ್ಮೆ ಕ್ರಾಂತಿಯು ಪರಂಪರೆಯು ಕಾರಣದಿಂದಲಾಗಿ ಬರೇ 30 ಕೋಟಿಗೆ ಆ ಸಂಖ್ಯೆಯು ಇಳಿದಿತ್ತೆಂದೂ ವಿದ್ವಾಂಸರು ತೋರಿಸಿಕೊಡುತ್ತಾರೆ ಆ ಕಾಲಗಳಲ್ಲಿ ಈ ದೇಶದಲ್ಲಿ ಆಹಾರಕ್ಕೆ ಕೊರತೆಯಾಗಲೀ ಇಲ್ಲವೇ ಜನಸಂಖ್ಯೆಯು ಇಳಿದಾಗ ಅಧಿಕವಾಗಿ ಉಳಿತಾಯವಾಗಲೀ ಕಂಡುಬಂದಿಲ್ಲ. ಆದುದರಿಂದ ಆಹಾರ ಕೊರತೆಗೆ ಜನಸಂಖ್ಯೆಯು ಮೂಲ-ಕಾರಣವಲ್ಲ.

ಜನರ ವೃತ್ತಿವೈರಕ್ಯ ವಿಚಾರಧಾರೆಯೇ ಅದಕ್ಕೆ ಕಾರಣ ಬುದ್ಧಿ ಜೀವಿಗಳ ಸಂಖ್ಯೆಯು ಹೆಚ್ಚಾದೊಡನೆ ಉತ್ಪಾದಕ ವರ್ಗವು ಕಡಿಮೆಯಾಗಿ ತನ್ಮೂಲಕವಾಗಿ ಆಹಾರ ಉತ್ಪಾದನೆಯು ಕಡಿಮೆ ಆಗುತ್ತದೆ. ಹಿಂದೆ ಬುದ್ಧರ ಪ್ರಾಬಲ್ಯಯುಗದಲ್ಲೂ ಹೀಗಾಗಿದ್ದಿತು. ಆಗ ಪ್ರತಿಯೊಬ್ಬನೂ ಶಾಸ್ತ್ರಾರ್ಥ ತಿಳಿದವನೂ, ಬೋಧಕನೂ, ಪ್ರಚಾರಕನೂ ಆಗಲು ಬಯಸುತ್ತಿದ್ದನು ಹಳ್ಳಿಹಳ್ಳಿಗಳಲ್ಲಿಯೂ ವಾಚನಾಲಯಗಳೂ ವಿದ್ಯಾಮಂದಿರಗಳೂ ಇದ್ದುವು. ಎಲ್ಲರೂ ಪಂಡಿತರೂ, ಬೋಧಕರೂ ಆಗ ಬಯಸುವವರು. ಹೀಗಾಗಿ ಆ ಕಾಲದಲ್ಲಿ ರಾಷ್ಟ್ರದ ಕಾಯಿಕ ವೃತ್ತಿ ಮತ್ತು ಕೃಷಿ ವೃತ್ತಿಗಳು ಹಿಂದೆ ಬಿದ್ದುವು. ಹಳ್ಳಿಗಳು ಬಂಜರುಗಳಾದುವು ರಾಷ್ಟ್ರದ ಬಲಗುಂದಿತು. ರಾಷ್ಟ್ರೀಯತ್ವಕ್ಕೆ ಂತಲೂ ಅಂತರ್ರಾಷ್ಟ್ರೀಯತ್ವ ವಿಶ್ವೈಕ್ಯ ಒಂಧುತ್ವ ಮೊದಲಾದ ವಿಚಾರ ವಿ ನಾ ಜನರಲ್ಲಿ ನೆಲೆನಿಂತಿತು ಆದುದರಿಂದ ಅನ್ಯರ ಆಕ್ರಮಣವಾಗಿ ದೇಶವು ಅ ಕಷ್ಟವನ್ನನುಭವಿಸಬೇಕಾಯಿತು

ಇಂದಿನ ಪರಿಸ್ಥಿತಿಯೂ ಹಾಗೆಯೇ ಆಗಲು ತೊಡಗಿದೆ ಹಳ್ಳಿ ಹಳ್ಳಿಯಲ್ಲಿ ಪಾಠಶಾಲೆಗಳು, ವಾಚನಾಲಯಗಳು ಎಲ್ಲರೂ ಓದುವವರು, ಕಲಿಯುವವರು. ದೇಹ ಪರಿಶ್ರಮದಲ್ಲಿ ಆರಾಮ ಇಷ್ಟವಿಲ್ಲ ಇಂದು ಅಕ್ಷರಾಭ್ಯಾಸದ ಕೊರತೆಯಿಂದ ಈ ತರದ ದುರ್ಭಿಕ್ಷವಲ್ಲ ಉತ್ಪಾದಕ ವರ್ಗದ ಕೊರತೆಯಿಂದ ಹೀಗಾಗಿದೆ ಇಂದಿನ ಬೇಸಾಯಗಾರರ ಅವಸ್ಥೆಯೂ ಶೋಚನೀಯವಾಗಿದೆ ಅವರಲ್ಲಿ ಗೇಯುವ ಹುರುಪಿಗಿಂತ ಓದುವ-ಮಾತಾಡುವ ಇಲ್ಲವೆ ಉಡುಪು ತೊಡುವುಗಳಿಂದ ತಿರುಗಾಡುವ ಹುರುಪು ಹೆಚ್ಚಾಗಿದೆ ಅವರ ಎತ್ತುಗಳು ಒಡಕಲು ದನಗಳು ಹಾಲಿಲ್ಲದ ಹೊಟ್ಟುಗಳು, ಮಕ್ಕಳು ಕ್ಷೀಣ, ಮನೆಯವರು ರೋಗಿಗಳು, ಹೊಟ್ಟೆಗಿಲ್ಲ. ಒಟ್ಟಿಗಿಲ್ಲ, ಬಡತನವು ಅವರಿಸಿ ನಿಂತಿದೆ. ಇಷ್ಟು ಹೀನಾವಸ್ಥೆಗೆ ಇಳಿದ ಅವರಿಗೆ ಉನ್ನತಿ ಮಾರ್ಗವನ್ನು ತಿಳಿಸಿದರೂ ತಲೆಗೇ ಹತ್ತದು. ತಮ್ಮ ಗೋವುಗಳನ್ನು ಪುಷ್ಟಿಗೊಳಿಸಿ ಹೆಚ್ಚು ಸಾಂವನ್ನು ಹೊಲದಲ್ಲಿ ಉಂಟು ಮಾಡಿ ಪೈರೆತ್ತಲು ಪರಿಶ್ರಮಿಸಬೇಕೆಂದು ತಿಳಿಸುವ ದಾರಿಯೇ ಇಲ್ಲ ಅಂತಹರು ನೆರೆಹೊರೆಯ ಶ್ರೀಮಂತರಾದಾಗಲೂ ಕಂಡು ಅವರ ಸುಖಕ್ಕೆ ಮತ್ಸರಿಸಿ ಅವರಿಂದ ಅಪಹರಿಸಲು ಹವಣಿಕೆಯುಳ್ಳವರಾಗುವರು

ತಮ್ಮ ಹುಟ್ಟುವಳಿಯು ತಮಗೇ ಸಾಲದಿರುವಾಗ ಧನಿಗೆ ಕೊಡದಿರುವುದೇ ನ್ಯಾಯವೆಂದು ಯೋಚನೆಯೂ ಬರುವುದು ಆಗ ಅವರ ಮೇಲೆ ಸಮಾಜವಾದದ ತತ್ವವನ್ನಾದರೂ ಬೋಧಿಸಿದರೆ ಸರಿ, ಬೇಗನೆ ಅದನ್ನು ಸ್ವೀಕರಿಸಿ, ಕಳವು, ಕೊಲೆ, ಸುಲಿಗೆ ಅತ್ಯಾಚಾರಾದಿಗಳಿಗೆ ಅವರಿಳಿದು ಅರಾಜಕತೆಯುಂಟು ಮಾಡುವರು ಇವುಗಳೆಲ್ಲವೂ ಬಾರದಂತಾಗಬೇಕಾದರೆ ಪಶುಪಾಲನೆಯು ಸ್ವಲ್ಪ ಮಾಡಿ ಒಳ್ಳೆಯಂತಾಗಿ ಗೋಧನದಲ್ಲಿ ವೃದ್ಧಿ ಪಡೆಯುವಂತೆ ಮೊತ್ತಮೊದಲಾಗಬೇಕು

— ಸಶೇಷ

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



ಅಪೆರಾ— 26-4-59 ರಿಂದ

ಇಬ್ಬರು ಸಹೋದರಿಯರು ತಮಿಳು

ಪಾತ್ರ— ಜಮುನಿ ಗಣೇಶ್, ಸಾವಿತ್ರಿ, ಸಂಬಿಯಾರ್, ಗಿರಿಜಾ, ದೊರೈರಾಜ್

ಪ್ರತಿದಿನ 3 ಆಟಗಳು

ವುಡ್‌ಲಾಂಡ್

Glorious 4th Week

ಒನ್ಮೆ ನೋಡಿದರೆ ಮತ್ತೊನ್ಮೆ ನೋಡಲು ಬೇಕೆನ್ನಿಸುವ ಚಿತ್ರ

ಅನಾಡಿ

(ಹಿಂದಿ)

ತಾರಾಗಣ— ನೂರ್ಜ, ರಾಜ್ ಕಪೂರ್

ಮೋತೀಲಾಲ್, ಶುಭಾ ಕೊಚೆ

SHAKTI

SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಅಶೋಕಾ ಬಜಾರ್ ಮೈಸೂರು

For Quality Printing

L. N. Press

Sivarampet, Mysore

Edited, Printed & Published by Dharma Prachara Nurata M. S. Krishna Rao. at the Satyavadi Press Chamarajapuram, Mysore